1	2	3	4	5	6
20.	ಗುಲಬರ್ಗಾ	ಆಳಂದ	ಆಳಂದ	73.00	--
21.		ಚಿಂಚೋಳಿ	ಚಿಂಚೋಳಿ	91.50	--
22.	ತುಮಕೂರು	ಸಿರಾ	ಯಲಿಯೂರು	445.00	--

ಟಿಪ್ಪಣಿ

• ಕ್ರಮ ಸಂಖ್ಯೆ 1 ರಿಂದ 3 – 2005–06ನೇ ಸಾಲಿನ ಫೆಬ್ರವರಿ ಮಾರ್ಚ್ ನಲ್ಲಿ ಹಣ ಬಿಡುಗಡೆ ಮಾಡಿದ್ದು, ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

• ಕ್ರಮ ಸಂಖ್ಯೆ 4 ರಿಂದ 10 ರವರೆಗೆ – 2006–07ನೇ ಸಾಲಿನಲ್ಲಿ ವಿವಿಧ ಯೋಜನೆಯಡಿ ಹಣ ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಗೆ ಟೆಂಡರ್‌ಗಳನ್ನು ಕರೆಯಲಾಗಿದೆ.

• ಕ್ರಮ ಸಂಖ್ಯೆ 11–ಹಣ ಬಿಡುಗಡೆ ಮಾಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

• ಉತ್ತರ ಕನ್ನಡ ಜಿಲ್ಲೆಯ ಭಟ್ಕಳ, ರಾಮನಗರ, ಯಲ್ಲಾಪುರ ಮತ್ತು ಕೋಲಾರ ಜಿಲ್ಲೆಯ ಗೌರಿಬಿದನೂರು ಹಾಗೂ ಬೆಳಗಾವಿಯ ಗೋಕಾಕ್ ಗಳಿಗೆ ಕಾಮಗಾರಿಗಳನ್ನು ಕೈಗೊಳ್ಳಲು ಹಣ ಬಿಡುಗಡೆ ಮಾಡಿದೆ.

• ಕ್ರಮ ಸಂಖ್ಯೆ. 17 ರಿಂದ 22 ರವರೆಗೆ ಹಣ ಬಿಡುಗಡೆಯಾಗಿ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

1312 (2052) ಶ್ರೀ ಆಂಜನೇಯ ಹೆಚ್ (ಭರಮಸಾಗರ) :– ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದಿಂದ ಬೆಂಗಳೂರಿನಲ್ಲಿ ಕಳೆದ ಐದು ವರ್ಷಗಳಿಂದ ಎಷ್ಟು ಕೈಗಾರಿಕಾ ಎಸ್ಟೇಟ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ;

ಆ) ಎಷ್ಟು ಜನರಿಗೆ ನಿವೇಶನ ಅಥವಾ ಶೆಡ್‌ಗಳನ್ನು ವಿತರಿಸಲಾಗಿದೆ;

ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರಿಗೆ ಎಷ್ಟು ಹಂಚಿಕೆ ಮಾಡಲಾಗಿದೆ;

ಈ) ಯಾವ ಯಾವ ಶೆಡ್ಡುಗಳಿಗೆ ದರ ನಿಗದಿ ಪಡಿಸಲಾಗಿದೆ;

ಉ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೇನಾದರೂ ಕಡಿಮೆ ದರ ನಿಗದಿಪಡಿಸಲಾಗಿದೆಯೇ?

ಶ್ರೀ ಶಿವಾನಂದ ನಾಯ್ಕ (ಸಣ್ಣ ಕೈಗಾರಿಕಾ ಸಚಿವರು) :

ಅ) ವೀರಸಂದ್ರ 2ನೇ ಹಂತ ಮತ್ತು ಬೊಮ್ಮಸಂದ್ರ 2ನೇ ಹಂತ ಕೈಗಾರಿಕಾ ವಸಾಹತುಗಳನ್ನು 2003–04ರಲ್ಲಿ ಸ್ಥಾಪಿಸಲಾಗಿದೆ.

ಆ) 98 ನಿವೇಶನಗಳು ಹಾಗೂ 29 ಶೆಡ್ಡುಗಳನ್ನು ವಿತರಿಸಲಾಗಿದೆ.

ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರಿಗೆ 2 ಮಳಿಗೆಗಳು ಹಾಗೂ 5 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

ಈ) ಹಂಚಿಕೆಯಾಗಿರುವ ಎಲ್ಲಾ ಶೆಡ್ಡುಗಳಿಗೆ ದರ ನಿಗದಿ ಪಡಿಸಲಾಗಿದೆ.

ಉ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ, ಮಳಿಗೆ/ ನಿವೇಶನದ ದರದ ಮೇಲೆ ಶೇಕಡ 40ರಷ್ಟು ಅನುದಾನದೊಂದಿಗೆ (ರೂ.2.00 ಲಕ್ಷಕ್ಕೆ ಮೀರದಂತೆ) ದರ ನಿಗದಿಪಡಿಸಲಾಗಿದೆ.

1314 (1649) ಡಾ॥ ಅನ್ನದಾನಿ ಕೆ. (ಮಳವಳ್ಳಿ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಂದಾಯ ಇಲಾಖೆಯಲ್ಲಿ ಗ್ರಾಮಸಹಾಯಕರಾಗಿ 4ನೇ ದರ್ಜೆ ನೌಕರರು ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಾದರೆ, ಅವರುಗಳನ್ನು ಖಾಯಂಗೊಳಿಸಲು ಇದುವರೆವಿಗೂ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣಗಳೇನು;

ಇ) ಈ ನೌಕರರಲ್ಲಿ ಪರಿಶಿಷ್ಟ ಜಾತಿ–ಪರಿಶಿಷ್ಟ ಪಂಗಡದವರು ಹೆಚ್ಚಾಗಿ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದರೆ, ತುಳಿತಕ್ಕೆ ಒಳಗಾಗಿರುವ ನೌಕರರನ್ನು 25–30 ವರ್ಷಗಳಿಂದ ಏಕೆ ಖಾಯಂಗೊಳಿಸಿರುವುದಿಲ್ಲ?